ಶ್ರೀ ಜಿ. ಪಾಪಣ್ಣ.—ಕ್ಯಾಸ್ ಬ್ರೀಡ್ ಗೂಡುಗಳ ವಿತರಣೆಯನ್ನು ನಿರ್ಧಾರ ಮಾಡಬೇಕಾದರೆ: ಯುದ್ಧಕ್ಕೆ ಮುಂಚೆ ಆಸ್ಪ್ಟ್ರೇಲಿಯಾದವರು ವರ್ತಕರಿಗೆ 16 ರೆಂಡಿಟ. ಇರಬೇಕೆಂದು ಗೊತ್ತು ಮಾಡಿದ್ದರು. ಈಗ ನೀವು ರೆಂಡಿಟ 17 ಆಗಿದೆಯೆಂದು ಹೇಳಿದ್ದೀರಿ, ಅಂದರೆ ರೆಂಡಿಟ 16 ರಿಂದ 17 ಆದರೆ, ರೆಂಡಿಟ ಇಳಿದಿದೆಯೆಂದು ಹೇಳುತ್ತೀರಾ ಅಥವಾ ಏರಿದೆಯೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಾವು upper limit ಮತ್ತು lower limit ಎಂದು ಗೊತ್ತು ಮಾಡಿದ್ದೇವೆ. ಅಷ್ಟೆ.

ಶ್ರೀ ಜಿ. ಪಾಪಣ್ಣ.—ತಾವು ಹೇಳಿದ ಪ್ರಕಾರ 17 ರೆಂಡಿಟ ಆಗಿದೆಯೆಂದು ಹೇಳಿದರೆ, ಗೂಡಿನ ಮಟ್ಟ ಇಳಿದಿದೆಯೆಂದು ಒಪ್ಪಬೇಕಲ್ಲವೇ ?

(No Answer.)

ಶ್ರೀ ಜಿ. ಪಾಪಣ್ಣ.—ಸಂಶೋಧನೆ ಮಾಡುತ್ತೇವೆಂದು ಹೇಳುತ್ತೀರಿ, ಅಲ್ಲ ಏನೂ ನಡೆಯುತ್ತಿಲ್ಲವೆಂದು ಒಪ್ಪುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಏನೂ ನಡೆಯುತ್ತಿಲ್ಲವೆಂದಲ್ಲ, ಕೃಷ್ಣರಾಜೇಂದ್ರ ಹಿರ್‌ನಲ್ಲಿ ಸಂಶೋಧನಾಲಯವನ್ನು ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಳ್ಳುವಾಗ, ಮಂತ್ರಿಗಳು ಅಲ್ಲ ನೋಡಿ, ಒಂದು ವರದಿ ಕೇಳಿದ್ದಾರೆ, ಅದು ಬಂದನಂತರ ನೋಡಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಪಾಪಣ್ಣ.—ಬಳಿಗಿರಿ ರಂಗನ ಬೆಟ್ಟದಲ್ಲಿ ಕಟ್ಟಡಗಳು ಇನ್ನೂ ಮುಗಿದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. SIDDAVEERAPPA.—I concede that there is some delay. I assure the Hon'ble Member that immediate steps will be taken.

ಶ್ರೀ ಜಿ. ಪಾಪಣ್ಣ.—ಬಳಿಗಿರಿ ರಂಗನ ಬೆಟ್ಟದಲ್ಲಿ ಎಷ್ಟುಸಿಬ್ಬಂದಿ ಮಂಜೂರಾಗಿದೆಯೋ ಅದರಲ್ಲಿ ಕಾಲು ಭಾಗಕೂಡ ಕೆಲಸ ಮಾಡುತ್ತಿಲ್ಲವೆಂಬುದನ್ನು ಒಪ್ಪುತ್ತೀರಾ ?

(No answer.)

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣದಲ್ಲಿ ಸಂಶೋಧನಾಲಯ ಏದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಚನ್ನಪಟ್ಟಣದಲ್ಲಿ ಬೇರೆ ಕಡೆ ಹೊಸ ಕಟ್ಟಡವನ್ನು ಕಟ್ಟಬೇಕೆಂದು ಮಂಜೂರಾಗಿದೆ, ಬಡ್ಡೆಟ್ಟನಲ್ಲಿಕೂಡ ಇದೆ. ಅದೊಂದೇ ಕಡೆ ಅಲ್ಲ, ಆಲ್ಲಿಯೂ ಮಾಡುತ್ತೇವೆ, ಬಳಿಗಿರಿ ರಂಗನ ಬೆಟ್ಟ ಮತ್ತು ಕೃಷ್ಣರಾಜೇಂದ್ರ ಹಿರ್‌ನಲ್ಲಿಯೂ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಅದು ಸಂಶೋಧನಾಲಯವೊ ಅಥವಾ ಬರಿಯ ಫಾರ್ಮ್ ಬ್ರೀಡ್‌ಗಳನ್ನು ಮಾತ್ರ ಅಭಿವೃದ್ಧಿ ಮಾಡುತ್ತಾರೊ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನೂಕೂಡ ಸಂಶೋಧನೆಯೆಂದು ಭಾವಿಸಬಹುದು. ಫಾರ್ಮ್ ಬ್ರೀಡ್ ರೇರ್ ಮಾಡುವುದುಕೂಡ ಒಂದು ವಿಧವಾದ ಸಂಶೋಧನೆಯೆಂದು ನನ್ನ ಭಾವನೆ.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣದಲ್ಲಿ ಈಗ ಸಂಶೋಧನಾಲಯವನ್ನು ಎಲ್ಲ ಮಾಡಬೇಕೆಂದು ಮಾ ದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಕಟ್ಟಡಕ್ಕೇನೋ ಹಣ ಮಂಜೂರು ಮಾಡಿದೆ, ಎಲ್ಲ ಕಟ್ಟುತ್ತಾರೆಂಬ ಬಗ್ಗೆ ನನ್ನಲ್ಲಿ ವಿವರಗಳಿಲ್ಲ.

ಶ್ರೀ ವಿ. ವೆಂಕಟಪ್ಪ.—ಕೇಂದ್ರ ಸರ್ಕಾರದವರು ಸಂಶೋಧನೆಗೆ ಸಹಾಯ ಕೊಡುತ್ತೇವೆಂದು ಹೇಳಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೇಳಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಎಷ್ಟು ಕೊಡುತ್ತಾರೆ ?

ಶ್ರೀ ಎಸ್. ಸಿದ್ದವೀರಪ್ಪ.—ನೋಟೀಸು.

ಶ್ರೀ ವಿ. ವೆಂಕಟಪ್ಪ.—ಮೂರು ಲಕ್ಷ ಚಿಲ್ಲರೆ ಮೂರು ವರ್ಷಗಳಿಂದಲೂ ಮಂಜೂರು ಮಾಡುತಿದ್ದರೂ ಅದರಲ್ಲ ನಲವತ್ತು, ಅಥವಾ ಐವತ್ತು ಸಾವಿರ ರೂಪಾಯಿಗಳು ಮಾತ್ರ ಖರ್ಚಾಗುತ್ತಿವೆ, ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಎಷ್ಟು ಮಂಜೂರು ಮಾಡಿದ್ದೇವೋ ಅಷ್ಟು ಖರ್ಚಾಗಿಲ್ಲ, ನಿಜ.

ಶ್ರೀ ವಿ. ವೆಂಕಟಪ್ಪ.—ಈ ವರ್ಷಕೂಡ ಹೀಗೆಯೇ ಆಗಿದೆಯಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹ್ಞೂದು.

ಶ್ರೀ ವಿ. ವೆಂಕಟಪ್ಪ.—ಈ ವರ್ಷವಾದರೂ ಇದನ್ನು ಬೇಗ ಮುಂದುವರಿಸಲು ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಇದಕ್ಕೆ ಹಣ ಸಹಾಯ ಕೊಡುತ್ತೇವೆಂದು ಹೇಳಿದ್ದಾರೆ. They are very particular to push through this scheme.

ಶ್ರೀ ವಿ. ವೆಂಕಟಪ್ಪ.—ಇದಕ್ಕೆ ಇನ್ನೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ, ಇನ್ನೂ ಅಂದಾಜು ಕೂಡ ಮಂಜೂರು ಮಾಡಿಲ್ಲ.

Sri H. SIDDAVEERAPPA.—Government are particular to push through this work as much as possible.

ಶ್ರೀ ವಿ. ವೆಂಕಟಪ್ಪ.—ಬೇರೆ ಕಡೆ ಇದಕ್ಕಾಗಿ ಇಷ್ಟು ಹಣವನ್ನು ಖರ್ಚುಮಾಡಿ ಕಟ್ಟುವುದು ಅನಾವಶ್ಯಕ, ಚನ್ನಪಟ್ಟಣದಲ್ಲಿರುವುದನ್ನೇ ಉಪಯೋಗಿಸಿಕೊಂಡರೆ ಸಾಕಲ್ಲವೆ ?

Sri H. SIDDAVEERAPPA.—I will consider the suggestion of the Hon'ble Member, Sir.

Murder cases in Hassan District in 1952.

Q.—540. Sri B. N. BORANNA GOWDA (Belur).—

Will the Government be pleased to state :—

(*a*) the number of murder cases reported in Hassan District from January 1952 up to the end of December ;

(*b*) of these, the number of cases that went up to the Sessions Court and ended in convictions ?

A.—Sri H. SIDDAVEERAPPA (Minister for Home and Industries).—

(*a*) Thirteen.

(*b*) Of the 13 cases referred to above, 9 cases went up to the Sessions Court and 8 cases ended in convictions.

ಶ್ರೀ ಬಿ. ಎಚ್. ಬೋರಣ್ಣಗೌಡ.—13 ಕೇಸುಗಳಲ್ಲಿ 8 ಕೇಸ್‌ಗಳಲ್ಲಿ ಕನ್‌ವಿಕ್ಷನ್ ಆಗಿದೆ, ಎಷ್ಟು ಇನ್ನೂ ವಿಚಾರಣೆಯಲ್ಲಪೆಯೆ ?

ಅಧ್ಯಕ್ಷರು.—ಅದರಲ್ಲಿ 9 ಕೇಸುಗಳು ಸೆಷನ್ಸ್ ಕೋರ್ಟಿಗೆ ಹೋದವೆಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ. ಎಚ್. ಬೋರಣ್ಣ ಗೌಡ.—ಇನ್ನುಳಿದ ನಾಲ್ಕು ಕೇಸುಗಳು ಮ್ಯಾಜಿಸ್ಟ್ರೇಟು ಕೋರ್ಟಿನಲ್ಲಿ ವಿಚಾರಣೆಯಲ್ಲಪೆಯೆ ?

Sri H. SIDDAVEERAPPA.—I want notice regarding the other four cases.

ಶ್ರೀ ಬಿ. ಎಚ್. ಬೋರಣ್ಣ ಗೌಡ.—ಪೋಲೀಸಿನವರ ತನಿಖೆ ನಡೆಸುವ ಸಂದರ್ಭದಲ್ಲಿ ಜನರೇನಾದರೂ ತೊಂದರೆ ಕೊಟ್ಟರೆ ಅವರನ್ನು ಹಿಡ್ಕು ಬಸ್ತಿನಲ್ಲಡಲು ಏನು ಕಾನೂನಿದೆ ?

Sri H. SIDDAVEERAPPA.—Please repeat your question.

ಶ್ರೀ ಬಿ. ಎಚ್. ಬೋರಣ್ಣಗೌಡ.—ಪೋಲೀಸ್ ಇನ್‌ವೆಸ್ಟಿಗೇಷನ್ನಿನಲ್ಲಿ ಸಾರ್ವಜನಿಕರೇನಾದರೂ ಪ್ರಯೋಜನ ಪಡೆದು, ತನಿಖೆ ಸರಿಯಾಗಿ ನಡೆಸಲು ತೊಂದರೆ ಕೊಟ್ಟರೆ, ಇದನ್ನು ತಡೆಯಲು ಏನಾದರೂ ಕಾನೂನಿದೆಯೆ ?

Sri H. SIDDAVEERAPPA.—The Police have ample powers; if there is any interference in investigation, the law provides the course of action that will have to be followed.

Sri M. LINGANNA.—Are Government aware that the accused in murder cases are kept by the Police in places which are inhuman.

Mr. SPEAKER.—The Hon'ble Minister need not answer.

Government Bakelite Factory.

Q.—595. Sri B. HUTCHE GOWDA (Turvekere).—

Will the Government be pleased to state :—

(*a*) the amount of capital invested on Government Electric Factory;

(*b*) the quantity of articles manufactured in the Factory each year during the last five years;

(*c*) (i) the quantity of raw materials purchased each year;

(ii) whether sufficient raw materials are being kept in stock;

(d) the gross profit and the net profit earned in these years ?

A.—Sri H. SIDDAVEERAPPA (Minister for Home and Industries).—

(*a*) Rs. 64,66,798.

(*b*)—

		Rs.
1947-48	..	12,95,084
1948-49	..	14,08,496
1949-50	..	23,31,054
1950-51	..	32,02,650
1951-52	..	35,65,282

(*c*) (i)—

1947-48	..	11,83,226
1948-49	..	22,93,903
1949-50	..	21,36,316
1950-51	..	21,19,665
1951-52	..	14,39,729

(ii) Yes.

(*d*)—

	Gross profit	*Net profit or net loss*
	Rs.	Rs.
1947-48 ..	4,20,600	—69,948
1948-49 ..	4,57,079	—49,995
1949-59 ..	4,00,052	—73,111
1950-51 ..	6,86,391	—47,278
1951-52 ..	9,26,517	+55,649

ಶ್ರೀ ಬಿ. ಹುಚ್ಚೇಗೌಡ.—ಈ ಕಾರ್ಖಾನೆಯಲ್ಲಿ ಬೇಕ್‌ಲೈಟ್ ಪ್ಲಾಂಟ್ ಎಂದು ಒಂದು ಶಾಖೆ ಇದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಇದೆ. ಮೊದಲು ಷುರು ಆದದ್ದು ಬೇಕ್‌ಲೈಟ್ ಪ್ಲಾಂಟ್.

ಶ್ರೀ ಬಿ. ಹುಚ್ಚೇಗೌಡ.—ಈಗ ಅದು ಕೆಲಸ ಮಾಡುತ್ತಿದೆಯೆ!

ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತಿದೆ.

ಶ್ರೀ ಬಿ. ಹುಚ್ಚೇಗೌಡ.—ಇದಕ್ಕೆ ಒಬ್ಬರು ಜನರಲ್ ಮ್ಯಾನೇಜರು ಇದ್ದಾರೆಯೆ ?

Sri H. SIDDAVEERAPPA.—There is a General Manager for the factory. It cannot function without a General Manager. I want notice to answer whether there is a General Manager specially for the bakelite section.

ಶ್ರೀ ಬಿ. ಹುಚ್ಚೇಗೌಡ.—ಈಗ ಅನೇಕ ವರ್ಷಗಳಿಂದ ಜನರಲ್ ಮ್ಯಾನೇಜರ್ ಇರಲಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?